# ವಿಧಾನಸಭಾಧ್ಯಕ್ಷ ಕಾಗೇರಿ, ವಿಪ ಸಭಾಪತಿ ಹೊರಟ್ಟಿ ಚಾಲನೆ



ಮೈಸೂರು ಅರಮನೆ ಮುಂಭಾಗದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸಿದರು. ಸಚಿವರಾದ ವಿ. ಸುನಿಲ್‌ಕುಮಾರ್, ಎಸ್.ಟಿ. ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಎಸ್.ಎ. ರಾಮದಾಸ್, ಜಿ.ಟಿ. ದೇವೇಗೌಡ, ಎಲ್. ನಾಗೇಂದ್ರ ಇದ್ದರು.



ದಸರಾ
ಅವರಿಗೆ
ಬಸವರ

ಕನ್ನಡಪ್ರಭ Fri, 08 October 2021
https://kpepaper.asianetnews.com/c/63620075



ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಮೃದಂಗ ಕಲಾವಿದ ಎ.ವಿ. ಆನಂದ್ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮೊದಲಾದವರು ಇದ್ದರು.

ಕನ್ನಡಪ್ರಭ Fri, 08 October 2021
https://kpepaper.asianetnews.com/c/63

• **ಕನ್ನಡಪ್ರಭ ವಾರ್ತೆ** ಮೈಸೂರು

ಸರಳ ಮತ್ತು ಸಂಪ್ರದಾಯಿಕ ದಸರಾ ಮಹೋತ್ಸವ ಅಂಗವಾಗಿ ಮೈಸೂರು ಅರಮನೆಯಲ್ಲಿ ಮುಂಭಾಗದಲ್ಲಿ ಆಯೋಜಿಸಲಾಗಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಗುರುವಾರ ಸಂಜೆ ಅರಮನೆಯ ಹೊಂಬೆಳಕಿನಲ್ಲಿ ಚಾಲನೆ ನೀಡಲಾಯಿತು.

ಅರಮನೆ ಮುಂಭಾಗದಲ್ಲಿ ನಿರ್ಮಿಸಲಾಗಿರುವ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಜಂಟಿಯಾಗಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಇದೇ ವೇಳೆ ಮೃದಂಗ ಕಲಾವಿದ ಎ.ವಿ. ಆನಂದ್ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಆನಂದ್ ಅವರ ಪತ್ನಿಯನ್ನು ಸಹ ಸನ್ಮಾನಿಸಲಾಯಿತು.

**ರಾಷ್ಟ್ರಕ್ಕೆ ಮೈಸೂರು ಮಾದರಿ:** ಈ ವೇಳೆ ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕವಾಗಿ ರಾಷ್ಟ್ರಕ್ಕೆ ಮೈಸೂರು ಮಾದರಿಯಾಗಿದೆ. ಮುಮ್ಮಡಿ ಕೃಷ್ಣರಾಜರಿಂದ ಆರಂಭವಾದ ದಸರಾ ವೈಭವವು 4 ಶತಮಾನಗಳಿಂದ ಅದರ ಪರಂಪರೆ ಮುಂದುವರೆದು ಬಂದಿದೆ. ನಾಲ್ವಡಿಯವರು ಮೈಸೂರು ಮಹಾರಾಜರಾಗಿ ಮೈಸೂರಿಗೆ ಕೊಟ್ಟ ಆಡಳಿತ ನಾವೆಲ್ಲರೂ ಸ್ಮರಿಸಬೇಕಿದೆ. ಅವರ ಅಭಿವೃದ್ಧಿ ಕೆಲಸ ಶ್ಲಾಘನಿಯ. ಅವರು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶಕ್ತಿ ತುಂಬಿದರು ಎಂದು ಹೇಳಿದರು.



ಬೆಂಗಳೂರಿನ ಪ್ರಭಾತ್ ಕಲಾವಿದರಿಂದ ಕರ್ನಾಟಕ ವೈಭವ ನೃತ್ಯರೂಪಕ.

12 ನೇ ಶತಮಾನದಲ್ಲಿ ಬಸವಣ್ಣನವರು ಅಡಿಗಲ್ಲು ಹಾಕಿದರೆ, ಮೈಸೂರು ರಾಜರು ಅದಕ್ಕೆ ಶಕ್ತಿ ತುಂಬಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮೈಸೂರು ಕೊಡುಗೆಯನ್ನು ಸ್ಮರಿಸಿಕೊಳ್ಳಬೇಕಿದೆ. ಇಲ್ಲಿ ಸುಸಂಸ್ಕೃತಿಯನ್ನು ಕಾಣುತ್ತಿದ್ದೇವೆ ಎಂದರೆ ಇಲ್ಲಿನ ಹಿರಿಯರು ಹಾಕಿಕೊಟ್ಟ ಬೇರಾಗಿದೆ. ಕೊರೋನಾ ಅಂತಹ ಕಷ್ಟದ ನಡುವೆಯೂ ಬದುಕು ರೂಪಿಸಿಕೊಳ್ಳಬೇಕೆಂಬ ಧೈರ್ಯ ನಮ್ಮ ಹಿರಿಯರು ಹಾಕಿಕೊಟ್ಟಿರುವುದನ್ನು ನಾವು ಸ್ಮರಿಸಬೇಕಿದೆ ಎಂದರು.

ಸರ್ಕಾರದ ಪ್ರಯತ್ನದ ಜತೆಗೆ ಜನರ ಸುಸಂಸ್ಕೃತ ಜವಾಬ್ದಾರಿಯೂ ಬೇಕಾಗುತ್ತದೆ. ಶಕ್ತಿ ದೇವತೆಯ ಆರಾಧನೆಯ ಜತೆಗೆ ನಮ್ಮನ್ನು ನಾವು ಅಭಿವೃದ್ಧಿ ಪಡಿಸಿಕೊಳ್ಳುವ ಚಿಂತನೆ ಬೆಳೆಸಿಕೊಳ್ಳಬೇಕಿದೆ. ಮೈಸೂರಿನ ಬಗ್ಗೆ ಅಭಿಮಾನ ಪಡುವ ಜತೆಗೆ ಜ್ಞಾನದ ನಾಡಾಗಿ ಮೈಸೂರು ಬೆಳಕು ಚೆಲ್ಲಿದೆ. ಇಲ್ಲಿ ಜ್ಞಾನದ ಬೆಳಕು ನೀಡಿದ್ದು, ಅಂತಹ ಜ್ಞಾನದ ಸಂಪಾದನೆಗೆ ಮುಂದಾಗಬೇಕಿದೆ. ಇಂದಿನ ಶಿಕ್ಷಣದಿಂದ ಕೆಲಸ ಸಿಗಬಹುದು. ಆದರೆ, ಸಂಸ್ಕೃತಿ, ಜ್ಞಾನ ಸಿಗುವುದು ಕಷ್ಟವಿದೆ ಎಂದು ಅವರು ತಿಳಿಸಿದರು.

**ಸಂಸ್ಕಾರ, ಸಂಸ್ಕೃತಿಗೆ ಮೈಸೂರು ಹೆಸರಾಗಿದೆ:** ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಸಂಸ್ಕಾರ ಹಾಗೂ ಸಂಸ್ಕೃತಿ ಗೆ ಮೈಸೂರು ಹೆಸರಾಗಿದ್ದು, ಇದು ಮೈಸೂರಿನ ಹೆಮ್ಮೆ ಮರೆಯಾಗುವುದಿಲ್ಲ. ದೇಶ ಮಾತ್ರವಲ್ಲದೆ ವಿದೇಶಗಳಿಂದಲೂ ದಸರಾ ವೀಕ್ಷಣೆ ಮಾಡುತ್ತಿರುವುದು ಮೈಸೂರು ಪರಂಪರೆಗೆ ಸಿಕ್ಕಿರುವ ಗೌರವವಾಗಿದೆ. ರಾಷ್ಟ್ರಕ್ಕೆ ಶ್ರೇಷ್ಠವಾದ ಕಾರ್ಯಕ್ರಮ ಎಂದರೆ ಅದು ಮೈಸೂರು ದಸರಾ ಕಾರ್ಯಕ್ರಮವಾಗಿದೆ ಎಂದರು.

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್, ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಎಸ್.ಎ. ರಾಮದಾಸ್, ಜಿ.ಟಿ. ದೇವೇಗೌಡ, ಎಲ್. ನಾಗೇಂದ್ರ, ಎಂಡಿಎ ಅಧ್ಯಕ್ಷ ಎಚ್.ವಿ. ರಾಜೀವ್, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಆರ್. ರಘು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಕೃಷ್ಣಪ್ಪಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ಜಂಗಲ್ ಲಾಡ್ಜ್ ಅಧ್ಯಕ್ಷ ಅಪ್ಪಣ್ಣ, ಉಪ ಮೇಯರ್ ಅನ್ವರ್ ಬೇಗ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಜಿಪಂ ಸಿಇಒ ಎ.ಎಂ. ಯೋಗೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಹನೂರು ಚನ್ನಪ್ಪ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಮೊದಲಾದವರು ಇದ್ದರು.

**ಸಾಂಸ್ಕೃತಿಕ ಕಾರ್ಯಕ್ರಮ:** ಆರಂಭದಲ್ಲಿ ಹರೀಶ್ ಪಾಂಡವ್ ಮತ್ತು ತಂಡದ ಸ್ಯಾಕ್ಸೋಫೋನ್ ಕಾರ್ಯಕ್ರಮ ನೆರವೇರಿತು. ನಿಂಗರಾಜ ಮತ್ತು ಮಧುಸೂದನ್ ತಂಡ ನಾಡಗೀತೆ ಹಾಡಿದರು. ಮೈಸೂರು ಸಂಸ್ಥಾನ ಗೀತೆ ಕಾಯೋ ಶ್ರೀಗೌರಿಯನ್ನು ಉನ್ನತಿ ಸಂಸ್ಥೆಯ ಕಲಾವಿದರು ಹಾಡಿದರು. ಉದ್ಘಾಟನೆ ಕಾರ್ಯಕ್ರಮ ಬಳಿಕ ಬೆಂಗಳೂರಿನ ಪ್ರಭಾತ್ ಕಲಾವಿದರು ಕರ್ನಾಟಕ ವೈಭವ ನೃತ್ಯರೂಪಕ ಪ್ರಸ್ತುತಪಡಿಸಿದರು.

**ನಾನು ಬೆಂಗಳೂರಿನವನಾಗಿದ್ದರೂ ಮೈಸೂರು ಕಂಡರೆ ನನಗೆ ಹೆಚ್ಚು ಹೆಮ್ಮೆ, ಪ್ರೀತಿ. ಜಯಚಾಮರಾಜೇಂದ್ರ ಒಡೆಯರ್ ಅವರನ್ನು ನೋಡಿ ಮಾತನಾಡಿ, ನಮ್ಮ ಸಂಗೀತ ಕಛೇರಿಯನ್ನು ನೋಡಿ ಬೆಂಬಲಿಸಿದ್ದರು. ಅವರು ದೊಡ್ಡ ವಿದ್ವಾಂಸರಾಗಿದ್ದರು. ಹಿಂದೂಸ್ಥಾನಿ, ಪಾಶ್ಚಾತ್ಯ ಸಂಗೀತವನ್ನು ಅಧ್ಯಯನ ಮಾಡಿದ್ದರು. ಅಪಾರ ಪ್ರಬುದ್ಧತೆ ಹೊಂದಿರುವ ಪರಂಪರೆಯನ್ನು ಮೈಸೂರು ಹೊಂದಿದೆ.**

• **ಮೃದಂಗ ಕಲಾವಿದ ಎ.ವಿ. ಆನಂದ್** ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪುರಸ್ಕೃತರು